## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕಿನ ಆದಿಚುಂಚನಗಿರಿ ಹಾಗೂ 128 ಗ್ರಾಮಗಳ DBOT ಆಧಾರಿತ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ಟೆಂಡರ್‌ನ್ನು ಅನುಮೋದಿಸುವ ಕುರಿತು.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 02 ಗ್ರಾನೀಸ(5)2012 ದಿ:12.07.2012.
2. ದಿನಾಂಕ:25.06.2015ರಂದು ನಡೆದ ಟೆಂಡರ್ ಅಂಗೀಕರಿಸುವ ಪ್ರಾಧಿಕಾರ ಸಭೆಯ ನಡವಳಿಗಳು.

--

**ಪೀಠಿಕೆ:**

ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕಿನ ಆದಿಚುಂಚನಗಿರಿ ಹಾಗೂ 128 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗೆ ದಿನಾಂಕ:12.07.2012ರಂದು ರೂ.63.00ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಈ ಯೋಜನೆಯನ್ನು DBOT ಆಧಾರದಲ್ಲಿ KTPP ಕಾಯ್ದೆಯನ್ವಯ ಅನುಷ್ಠಾನಗೊಳಿಸಲು ಷರತ್ತು ವಿಧಿಸಲಾಗಿತ್ತು. ಅದರನ್ವಯ DBOT ಆಧಾರದ ಮೇಲೆ KTPP ಕಾಯ್ದೆಯನ್ವಯ ಕರೆಯಲಾದ ಟೆಂಡರ್‌ಗಳಿಗೆ (ಪ್ರಥಮ ಮತ್ತು ದ್ವಿತೀಯ ಕರೆ) ಯಾವುದೇ ಪ್ರತಿಕ್ರಿಯೆ ದೊರೆತಿರುವುದಿಲ್ಲ. ತೃತೀಯ ಟೆಂಡರ್ ಕರೆಯಲ್ಲಿ ಮೆ:MEIL ಹೈದರಾಬಾದ್ ರವರು ಟೆಂಡರ್‌ನ್ನು ರೂ.164.24ಕೋಟಿಗಳಿಗೆ ಸಲ್ಲಿಸಿರುತ್ತಾರೆ.

2. ಉದ್ದೇಶಿತ ಯೋಜನೆಯಲ್ಲಿ ಪೈಪ್‌ಲೈನ್ ಉದ್ದದ ಹೆಚ್ಚಳ, ಪೈಪ್ ಮೆಟಿರಿಯಲ್‌ಗಳ ಬದಲಾವಣೆ, SR ದರಗಳನ್ವಯ ಅಂದಾಜು ವೆಚ್ಚದಲ್ಲಿ ಪರಿಷ್ಕರಣೆಯಾಗಿರುತ್ತದೆ. ಇದಲ್ಲದೆ ಮೆ:MEIL ಹೈದರಾಬಾದ್ ರವರು DI ಮತ್ತು PVC ಪೈಪ್‌ಗಳ ಬದಲಾಗಿ DI ಮತ್ತು HDPE ಪೈಪ್‌ಗಳನ್ನು ಪರಿಗಣಿಸಿದ್ದು, ಈ ಪ್ರಕ್ರಿಯೆಯನ್ನು Supervisory Control and Data Acquisition (SCADA) ವ್ಯವಸ್ಥೆಗೂ ಸಹ ಗುತ್ತಿಗೆದಾರರು ಸಹಮತಿ ಸೂಚಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ಯೋಜನೆಯ ಪರಿಷ್ಕೃತ ಅಂದಾಜು ರೂ.166.43ಕೋಟಿಗಳಾಗಿದ್ದು, ಮೂಲ ಅಂದಾಜಿಗೆ ಹೋಲಿಸಿದಲ್ಲಿ ಶೇ.164.18 ಹೆಚ್ಚಳವಾಗಿದೆ. ಗುತ್ತಿಗೆದಾರರು ಸಂಧಾನದ ನಂತರ ಟೆಂಡರ್ ಪ್ರೀಮಿಯಂ ಶೇ.9.68ರಂತೆ, ರೂ.154.629ಕೋಟಿಗಳಿಗೆ ಕಾಮಗಾರಿ ಅನುಷ್ಠಾನಗೊಳಿಸಲು ಒಪ್ಪಿರುತ್ತಾರೆ. ಸದರಿ ಮೊತ್ತವು ಅರ್ಥಶಾಸ್ತ್ರ ಸಲಹೆಗಾರರು, ನವದೆಹಲಿಯವರ ಜೂನ್ 2015ರ ಬೆಲೆ ಸೂಚ್ಯಂಕಗಳಿಗೆ (Price Indices)ನ ಆಧಾರದಂತೆ ಮತ್ತು ಗುತ್ತಿಗೆದಾರರು ಒಪ್ಪಿರುವ 9.68% ಟೆಂಡರ್ ಪ್ರೀಮಿಯಂನ್ನು ಒಳಗೊಂಡಿರುತ್ತದೆ. ಈ ಟೆಂಡರ್‌ಗೆ ಮೇಲೆ (2)ರಲ್ಲಿ ಓದಲಾದ ಟೆಂಡರ್ ಅಂಗೀಕರಿಸುವ ಪ್ರಾಧಿಕಾರ ಸಭೆಯು ಅಂಗೀಕರಿಸಿರುತ್ತದೆ.

3. ಈ ಹಿನ್ನೆಲೆಯಲ್ಲಿ ಆದಿಚುಂಚನಗಿರಿ ಹಾಗೂ 128 ಗ್ರಾಮಗಳ DBOT ಆಧಾರಿತ MVS ಯೋಜನೆಯ 5 ವರ್ಷಗಳ O&M ಸೇರಿದಂತೆ ಪರಿಷ್ಕೃತ ಅಂದಾಜು ರೂ.166.43ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಹಾಗೂ ಮೆ:MEIL ಹೈದರಾಬಾದ್‌ರವರು ನಮೂದಿತ ಮೊತ್ತವಾದ ರೂ.154.629ಕೋಟಿಗಳಿಗೆ 9.68% ಟೆಂಡರ್ ಪ್ರೀಮಿಯಂನೊಂದಿಗೆ ಸದರಿ ಪ್ರಸ್ತಾವನೆಯನ್ನು ಕೇಂದ್ರ ಪುರಸ್ಕೃತ NRDWP ಹಾಗೂ ರಾಜ್ಯ ವಲಯದ ಅನುದಾನದೊಂದಿಗೆ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ. ಆದ್ದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 69 ಗ್ರಾನೀಸ(5)2015 ಬೆಂಗಳೂರು, ದಿನಾಂಕ:28.04.2017.**

ಪೀಠಿಕೆಯಲ್ಲಿನ ಪ್ರಸ್ತಾನೆಯನ್ನು ಪರಿಶೀಲಿಸಿ, ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕಿನ ಆದಿಚುಂಚನಗಿರಿ ಹಾಗೂ 128 ಗ್ರಾಮಗಳಿಗೆ ಶಾಶ್ವತ ಮತ್ತು ಸುರಕ್ಷಿತ ಕುಡಿಯುವ ನೀರು ಪೂರೈಕೆ ವ್ಯವಸ್ಥೆ ಕಲ್ಪಿಸುವ DBOT ಆಧಾರಿತ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗೆ **5 ವರ್ಷಗಳ O&M ವೆಚ್ಚ ಸೇರಿದಂತೆ ಪರಿಷ್ಕೃತ ಅಂದಾಜು ರೂ.16643.50ಲಕ್ಷ (ಹದಿನಾರು ಸಾವಿರದ ಆರುನೂರ ನಲವತ್ತ್ಮೂರು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ)**ಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಹಾಗೂ ಈ ಯೋಜನೆಯನ್ನು **ಶೇ.9.68 ಟೆಂಡರ್ ಪ್ರೀಮಿಯಂನೊಂದಿಗೆ ರೂ.15462.96ಲಕ್ಷ (ಹದಿನೈದು ಸಾವಿರದ ನಾಲ್ಕು ನೂರ ಅರವತ್ತೆರಡು ಲಕ್ಷದ ತೊಂಭತ್ತಾರು ಸಾವಿರ ರೂಪಾಯಿಗಳು ಮಾತ್ರ)**ಗಳ ಮೊತ್ತದಲ್ಲಿ ಕೇಂದ್ರ ಪುರಸ್ಕೃತ NRDWP ಹಾಗೂ ರಾಜ್ಯ ವಲಯದಡಿ ಅನುಷ್ಠಾನಗೊಳಿಸಲು ಅನುಮೋದನೆ ನೀಡಲು ಸರ್ಕಾರವು ಹರ್ಷಿಸುತ್ತದೆ.

2. **ಈ ಆದೇಶವು ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತದೆ.**

a) ಸದರಿ ಟೆಂಡರ್‌ನ್ನು KTPP ಪಾರದರ್ಶಕ ನಿಯಮಗಳನ್ವಯ ಕ್ರಮವಹಿಸಲು ಸೂಚಿಸಲಾಗಿದೆ.

b) ಈ ಯೋಜನೆಯ ಅನುಷ್ಠಾನ ಮತ್ತು ಅನುದಾನ ವಿನಿಯೋಗದಲ್ಲಿ ಅನುಮೋದಿತ ಟೆಂಡರ್ ಮೊತ್ತ ಮೀರಿ ಹೆಚ್ಚಳವಾಗದಂತೆ ಅನುಷ್ಠಾನಾಧಿಕಾರಿಗಳು ನಿಗಾವಹಿಸಿ ಪ್ರಚಲಿತ ನಿಯಮಗಳನುಸಾರ ಅಗತ್ಯವಿರುವ ನಿಬಂಧನೆಗಳನ್ನು ಅಳವಡಿಸಿಕೊಂಡು ಸೂಕ್ತ ರೀತಿಯಲ್ಲಿ ಒಡಂಬಡಿಕೆ / ಕರಾರುಗಳನ್ನು ಮಾಡಿಕೊಳ್ಳತಕ್ಕದ್ದು.

c) ಯಶಸ್ವಿ ಗುತ್ತಿಗೆದಾರರು ಕಾಮಗಾರಿಯನ್ನು ಉತ್ತಮ ಗುಣಮಟ್ಟದಲ್ಲಿ ಮತ್ತು ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸಿ ಕಾರ್ಯಗತಗೊಳಿಸಬೇಕು ಹಾಗೂ ತದನಂತರ **5** ವರ್ಷಗಳ ಕಾಲ ಸದರಿ ಯೋಜನೆಯ ಸಂಪೂರ್ಣ ನಿರ್ವಹಣೆ ಹಾಗೂ ಕಾರ್ಯಾಚರಣೆ ಜವಾಬ್ದಾರಿಯನ್ನು ಸದರಿ ಸಂಸ್ಥೆಯೆ ನಿರ್ವಹಿಸತಕ್ಕದ್ದು.

d) ಯಾವುದೇ ಕಾರಣಕ್ಕೂ ಅನುಮೋದಿತ ಯೋಜನಾ ಅಂದಾಜು ವೆಚ್ಚದಲ್ಲಿ ಹೆಚ್ಚಳವಾದಲ್ಲಿ ಸದರಿ ಗುತ್ತಿಗೆದಾರರೇ ಅಂತಹ ಹೆಚ್ಚಳ ಭರಿಸತಕ್ಕದ್ದು.

e) ಈ ಯೋಜನಾ ಕಾಮಗಾರಿಯನ್ನು 12 ತಿಂಗಳ ಕಾಲಮಿತಿಯೊಳಗೆ ಅನುಷ್ಠಾನಗೊಳಿಸತಕ್ಕದ್ದು. ಯಾವುದೇ ವಿಳಂಬಕ್ಕೆ ಅವಕಾಶವೀಯಕೂಡದು. ಯೋಜನೆಯ ಘಟಕದಲ್ಲಿನ ಸಾಮಗ್ರಿಗಳ ಬೆಲೆ ಹೆಚ್ಚಳಕ್ಕೆ ಅವಕಾಶವಿರುವುದಿಲ್ಲ. ಬಲ್ಕ್‌ವಾಟರ್ ಮೀಟರ್‌ಗಳನ್ನು ಎಲ್ಲಾ ಜನವಸತಿಗಳ OHT ಬಳಿ ಅಳವಡಿಸತಕ್ಕದ್ದು.

f) ಯೋಜನಾ ಅಂದಾಜು ಮೊತ್ತದ ಕನಿಷ್ಠ **10%**ನ್ನು ಸಂಸ್ಥೆಯು ಯೋಜನೆ ಕಾರ್ಯಗತಗೊಳಿಸಿ ತೃಪ್ತಿಕರ **O&M** ವ್ಯವಸ್ಥೆ ನಿರೂಪಿಸುವ ಕಾರ್ಯಕ್ಷಮತೆ ಆಧರಿಸಿ ನಂತರ ಪಾವತಿಸಬೇಕು.

g) ಈ ಯೋಜನೆಯಡಿಯಲ್ಲಿನ ಅಂದಾಜು ಘೋಷ್ವಾರೆಯಂತೆ ಮುಖ್ಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿದ ನಂತರ, ಅವುಗಳ ಗುಣಮಟ್ಟ ಮತ್ತು ಕಾರ್ಯಕ್ಷಮತೆ ಆಧರಿಸಿ ಅನುಮೋದಿತ **ToR** ಹಾಗೂ ಟೆಂಡರ್ ಕರಾರಿನಂತೆ ನಿಯಮಾನುಸಾರ ಬಿಲ್ ಪಾವತಿಸಲು ಅನುಷ್ಠಾನಾಧಿಕಾರಿಗಳು ಹಾಗೂ

**CE/RDWSD** ಕ್ರಮವಹಿಸಬೇಕು. ಕಾಮಗಾರಿಯ ಕಾಲಕಾಲಿಕ ಪ್ರಗತಿ ಮತ್ತು ಗುಣಮಟ್ಟ ಪರಿಶೀಲಿಸಿ ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆ ವರದಿ ಮಾಡತಕ್ಕದ್ದು.

3. ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 272 ವೆಚ್ಚ-6 2016 ದಿನಾಂಕ:20.10.2016ರ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬಿ. ಕೃಷ್ಣಪ್ಪ)
ಸರ್ಕಾರದ ಉಪ ಕಾರ್ಯದರ್ಶಿ(ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಪ್ರತಿಗಳು:**

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಎಯು-1) ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲರು (ಎಯು-2) ಕರ್ನಾಟಕ, ಬೆಂಗಳೂರು.
4. ಉಪ ಮಹಾಲೇಖಪಾಲರು, ಮಹಾಲೇಖಪಾಲರು (ಎಯು-1) ರವರ ಶಾಖಾ ಕಛೇರಿ, ಕಾಲೇಜು ರಸ್ತೆ, ಧಾರವಾಡ.
5. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
8. ವಿಶೇಷಾಧಿಕಾರಿ (ಜಿಪಂ) ಹಾಗೂ ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು
9. ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ (6) (ಜಿಪಂ) ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
10. ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, 2ನೇ ಮಹಡಿ, ಕಾವೇರಿಭವನ, ಬೆಂಗಳೂರು-09.
11. ಅಧ್ಯಕ್ಷರು, ಜಿಲ್ಲಾ ಪಂಚಾಯತ್, **ಮಂಡ್ಯ.**
12. ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, **ಮಂಡ್ಯ.**
13. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು / ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, **ಮಂಡ್ಯ**
14. ಅಧೀಕ್ಷಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವೃತ್ತ, **ಮೈಸೂರು.**
15. ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, **ಮಂಡ್ಯ.**
16. ಮುಖ್ಯ ಲೆಕ್ಕಾಧಿಕಾರಿಗಳು, RDWSD, ಕಾವೇರಿಭವನ, ಬೆಂಗಳೂರು-09.
17. ನಿರ್ದೇಶಕರು, ಶ್ರೀ ಅಬ್ದುಲ್ ನಜೀರ್ ಸಾಬ್‌ರವರ ಗ್ರಾಮೀಣಾಭಿವೃದ್ಧಿ ರಾಜ್ಯ ಸಂಸ್ಥೆ, ಲಲಿತ್ ಮಹಲ್ ರಸ್ತೆ, ಮೈಸೂರು.
18. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆರವರ ಆಪ್ತ ಕಾರ್ಯದರ್ಶಿ.
19. ಆಯುಕ್ತರು, RDWSD ಮತ್ತು ಪದನಿಮಿತ್ತ ಸರ್ಕಾರದ ಕಾರ್ಯದರ್ಶಿ / ಆಂತರಿಕ ಆರ್ಥಿಕ ಸಲಹೆಗಾರರು ಇವರುಗಳ ಆಪ್ತ ಸಹಾಯಕರು.
20. ಉಪ ನಿರ್ದೇಶಕರು, Network Management Center (TNMC), ನಂ.49, ಖನಿಜ ಭವನ, ರೇಸ್ ಕೋರ್ಸ ರಸ್ತೆ, ಬೆಂಗಳೂರು.
21. ಜಿಲ್ಲಾ ಖಜಾನಾಧಿಕಾರಿಗಳು, ಮಂಡ್ಯ.
22. ಮ್ಯಾನೇಜರ್, ಸಿಂಡಿಕೇಟ್ ಬ್ಯಾಂಕ್, BWSSB ಬ್ರ್ಯಾಂಚ್, ರಾಜದ್ಲೂತ್ ಕಾಂಪ್ಲೆಕ್ಸ್, ಅವೆನ್ಯೂ ರಸ್ತೆ, ಬೆಂಗಳೂರು.
23. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ "ಕರ್ನಾಟಕ ವಿಕಾಸ" ಗ್ರಾಅಪಂ.ರಾಜ್ ಇಲಾಖೆ, ಬೆಂಗಳೂರು.
24. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾಅಪಂ.ರಾಜ್ ಇಲಾಖೆ (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು).
25. ರಾಜ್ಯ ಪತ್ರಾಗಾರ ಇಲಾಖೆ (ಬಿಡಿ ಪ್ರತಿ ಶಾಖೆ).
26. ಗ್ರಾಅಪಂ.ರಾಜ್ ಇಲಾಖೆಯ ಮಾಹಿತಿ ಕೇಂದ್ರ (10 ಪ್ರತಿಗಳು).
27. ಶಾಖಾ ರಕ್ಷಾ ಕಡತ ಹೆಚ್ಚುವರಿ ಪ್ರತಿಗಳು.